**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ**
**ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ.1101/2011</u>**

ದಿನಾಂಕಃ**.05.05.2026** ರಂದು ಸಾಕ್ಷಿಗೆ ಮದ್ಯಾಹ್ನ **1.20** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**8** | ಪ್ರಾಸಾ-**7** |
|---|---|
| ಹೆಸರು | - ಜಯರಾಮು |
| ತಂದೆ ಹೆಸರು | - ಲೇಟ್ ಈರಪ್ಪ |
| ವಯಸ್ಸು | - **64** |
| ಉದ್ಯೋಗ | - ನಿವೃತ್ತ ಎ.ಎಸ್.ಐ |
| ವಿಳಾಸ | - ಮಳವಳ್ಳಿ |

**<u>ಮುಖ್ಯವಿಚಾರಣೆ : ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ</u>**

ನಾನು **2010** ರಿಂದ **2019** ರವರೆಗೆ ಸಾತನೂರು ಪೋಲಿಸ್ ಠಾಣೆಯಲ್ಲಿ ಮುಖ್ಯಪೇದೆ ಆಗಿ ಕೆಲಸ ನಿರ್ವಹಿಸಿ ದ್ದೇನೆ.

ದಿನಾಂಕಃ **07.09.2011** ರಂದು ಸಂಜೆ **4.30** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಚಾ.ಸಾ. **1** ರವರು ಬಂದು ಲಿಖಿತ ದೂರನ್ನು ನೀಡಿದ್ದು, ನಾನು ಅದನ್ನು ಸ್ವೀಕರಿಸಿಕೊಂಡು ಠಾಣಾ ಅಪರಾಧ ಸಂಖ್ಯೇ **165/2011** ಎಂದು ದಾಖಲಕಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ.

ಸಾಕ್ಷಿ ಒಂದು ದೂರನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ದೂರು ಎಂದು ಗುರುತಿಸಿದ್ದು, ಸದರಿ **ದೂರನ್ನು ಈಗಾಗಲೇ** ನಿಪಿ-**1** ಎಂದು, ಸಾಕ್ಷಿ ಸಹಿಯನ್ನು ನಿಪಿ-**1(**ಬಿ**)** ಎಂದು ಗುರುತಿಸಲಾಯಿತು.

ಸಾಕ್ಷಿ ಒಂದು ಪ್ರಥಮ ವರ್ತಮಾನ ವರದಿಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಪ್ರಥಮ

ವರ್ತಮಾನ ವರದಿ  ಎಂದು ಗುರುತಿಸಿದ್ದು, ಸದರಿ **ಪ್ರಥಮ ವರ್ತಮಾನ ವರದಿಯನ್ನು** ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ನಂತರ ಆರೋಪಿಯನ್ನು ಪತ್ತೆ ಹಚ್ಚಲು ಠಾಣಾ ಸಿಬ್ಬಂದಿಯನ್ನು ನೇಮಿಸಿದ್ದು ಅವರು ಅದೇ ದಿನ 6.40 ಗಂಟೆಗೆ 3 ಆರೋಪಿತರನ್ನು ಹಾಜರುಪಡಿಸಿದ್ದು ನಾನು ದಸ್ತಗಿರಿ ನಿಯಮ ಪಾಲಿಸಿ ಆರೋಪಿತರನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದೆ.

ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾ.ಸಾ. 9 ರವರಿಗೆ ವಹಿಸಿಕೊಟ್ಟೆ .

ಆರೋಪಿತರನ್ನು ನೋಡಿದರೆ ಗುರುತಿಸಬಲ್ಲೆ ಅವರು ಇಂದು ಗೈರು ಹಾಜರಾಗಿದ್ದಾರೆ.

**ಪಾಟೀಸವಾಲುಃ  ಆರೋಪಿ ಪರ ಶ್ರೀ  ಕೆ.ಎಂ.ಜಿ.  ವಕೀಲರಿಂದಃ**

ದೂರು ಕೊಡಲು ಇಬ್ಬರು ಬಂದಿದ್ದರು, ಅವರೇ ಲಿಖಿತ ದೂರು ಬರೆದುಕೊಂಡು ಬಂದಿದ್ದರು.  ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಮಹಿಳೆಯ ಮಾನಕ್ಕೆ ಧಕ್ಕೆ ಆಗುವ ರೀತಿಯಲ್ಲಿ ನಡೆದುಕೊಂಡಿರುವುದಿಲ್ಲ ಆದರೂ ರಾಜಕೀಯ ಪ್ರೇರಿತವಾಗಿ ಪಿರ್ಯಾದಿ ಕೊಟ್ಟಿರುವ ದೂರನ್ನು ರಾಜಕೀಯದವರ ಮಾತುಕೇಳಿಕೊಂಡು ಪಡೆದುಕೊಂಡೆ ಎಂದರೆ ಸರಿಯಲ್ಲ.  ಆರೋಪಿತರನ್ನು ಪತ್ತೆ ಮಾಡಲು ಠಾಣಾ ಸಿಬ್ಬಂದಿಯಾದ ಹೆಚ್.ಸಿ. 112 ಗೋವಿಂದಯ್ಯ ಮತ್ತು ಪಿ.ಸಿ. 316 ರವರನ್ನು ನೇಮಿಸಿದ್ದೆ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ನಾನು ಪರಿಶೀಲನೆ ಮಾಡದೇ ಸುಳ್ಳು ದೂರು ದಾಖಲಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(**ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **1.30** ಗಂಟೆವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ**)**

ಓದಿ ಹೇಳಿ ಕೇಳಿ ಸರಿ ಇದೆ,

**3** ನೇ ಅಪರ ಸಿವಿಲ್. ಜಡ್ಜ ಮತ್ತು ಜೆ.ಎಂ.ಎಫ್.ಸಿ,
ಕನಕಪುರ